ಅರಸೀಕೆರೆ ಹಿರಿಯ ಸಿವಿಲ್ ಜಡ್ಜ್ ಮತ್ತು ಜೆಎಂಎಫ್ ಸಿ ರವರ ನ್ಯಾಯಾಲಯದಲ್ಲಿ

ಸಿ.ಸಿ. ನಂಃ **248/21**

| | | | |
|---|---|---|---|
| ಸಾಕ್ಷಿದಾರರ ಹೆಸರು | ಸೋಮೇಗೌಡ | ಸಿ.ಡಬ್ಲ್ಯೂ- | 1 |
| ತಂದೆ/ಗಂಡನ ಹೆಸರು | ಪರ್ವತೇಗೌಡ | ಪಿ.ಡಬ್ಲ್ಯೂ | 1 |
| ವಯಸ್ಸು | 54 ವರ್ಷ | ಪ್ರಮಾಣ ವಚನ ಭೋಧಿಸಿದ ದಿನಾಂಕ | |
| ವೃತ್ತಿ | ಸಿ.ಪಿ.ಐ ಮೂಡಿಗೆರೆ | | |
| ವಾಸ | ಮೂಡಿಗೆರೆ | 04.09.2024 | |

ಮುಖ್ಯ ವಿಚಾರಣೆ ಸಸಅ ರವರಿಂದಃ-

ನಾನು 20-01-2021 ರಿಂದ 18-11-2022 ರವರೆಗೆ ಅರಸೀಕೆರೆ ನಗರ ಪೋಲೀಸ್ ಠಾಣೆಯಲ್ಲಿ ಪಿ.ಎಸ್.ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ11-06-2022 ರಂದು ಸಂಜೆ 6-30 ಗಂಟೆಗೆ ನಾನು ಅರಸೀಕೆರೆ ನಗರ ಗಸ್ತು ಕರ್ತವ್ಯದಲ್ಲಿದ್ದಾಗ ಅರಸೀಕೆರೆ ನಗರ, ಹಾಸನ ರಸ್ತೆಯಲ್ಲಿರುವ 8 ನೇ ಕ್ರಾಸ್ ಹತ್ತಿರ ಮಸೀದಿ ಹತ್ತಿರ ಮಟ್ಕಾ ಚೀಟಿ ಬರೆದುಕೊಳ್ಳುತ್ತಿದ್ದಾರೆಂದು ಮಾಹಿತಿ ಬಂದಿರುತ್ತದೆ. ಪಂಚರಾದ ಚಾಸಾ-2 ಮತ್ತು 3 ಇವರನ್ನು ಠಾಣೆಗೆ ಬರಮಾಡಿಕೊಂಡು, ನನ್ನ ಜೊತೆ ನಮ್ಮ ಸಿಬ್ಬಂದಿಯವರಾದ ಚಾಸಾ-5 ರವರನ್ನು ಕರೆದುಕೊಂಡು ನಮ್ಮ ಇಲಾಖಾ ಜೀಪಿನಲ್ಲಿ ಸಂಜೆ 7-00 ಗಂಟೆಗೆ ಆ ಸ್ಥಳವನ್ನು ತಲುಪಿದೆವು. ಸ್ವಲ್ಪ ದೂರದಲ್ಲಿ ನಿಂತು ನೋಡಲಾಗಿ ಒಬ್ಬ ಆಸಾಮಿ ಸಾರ್ವಜನಿಕರಿಗೆ 1 ರೂ.ಗೆ 70 ರೂ. ಕೊಡುತ್ತೇನೆಂದು ಮಟ್ಕಾ ಚೀಟಿ ಬರೆದುಕೊಳ್ಳುತ್ತಾ ಸಾರ್ವಜನಿಕರಿಂದ ಹಣ ಪಡೆದು ಮೋಸ ಮಾಡುತ್ತಿರುವುದು ಕಂಡು ಬಂದಿತು. ಆಗ ನಾವು ನಮ್ಮ ಸಿಬ್ಬಂದಿಯವರು ಆತನ ಮೇಲೆ ಧಾಳಿ ಮಾಡಿ ಹಿಡಿದುಕೊಂಡಿದ್ದು ಆತನ ಹೆಸರನ್ನು ವಿಚಾರಿಸಲಾಗಿ ಮೊಹಮ್ಮದ್ ಇರ್ಫಾಜ್ ಎಂದು ಹೇಳಿದ್ದು ಆತನೇ 1 ನೇ ಆರೋಪಿಯಾಗಿರುತ್ತಾನೆ. ಆತನನ್ನು ವಿಚಾರಿಸಲಾಗಿ ಆ ಹಣವನ್ನು ಅಂಜು ಅಲಿಯಾಸ್ ಅಮ್ಜದ್ ರವರಿಗೆ ಕೊಡುತ್ತೇನೆಂದು ಹೇಳಿದ್ದು ಆತನ ಜೇಬಿನಲ್ಲಿ 200 ರೂ. ಮುಖಬೆಲೆಯ 3 ನೋಟುಗಳು, 100 ರೂ. ಮುಖಬೆಲೆಯ 6 ನೋಟುಗಳು, 50 ರೂ. ಮುಖಬೆಲೆಯ 1 ನೋಟನ್ನು ಒಟ್ಟು 1,250/- ರೂ. ಆತನ ಬಳಿಯಿಂದ ಒಂದು ಬಾಲ್ ಪೆನ್ನು ಹಾಗೂ ಮಟ್ಕಾ ಚೀಟಿಯನ್ನು ವಶಪಡಿಸಿಕೊಂಡು ರಾತ್ರಿ 8-00 ರಿಂದ 9-00 ಗಂಟೆಗೆಯವರೆಗೆ ದೀಪದ ಬೆಳಕಿನಲ್ಲಿ ಪಂಚರ ಸಮಕ್ಷಮ ಪಂಚನಾಮೆ ಮಾಡಿರುತ್ತೇನೆ. ಸದರಿ

ಪಂಚನಾಮೆಯನ್ನು ನಿಪಿ-1 ಎಂದು, ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.

ಸ್ಥಳದಲ್ಲಿ ಒಬ್ಬ ಆಸಾಮಿ ನಿಂತಿದ್ದು ಆತನ ಹೆಸರು ಚಾಂದ್ ಪಾಷ ಎಂದು ಹೇಳಿದ್ದು ಆತನನ್ನು ವಿಚಾರಿಸಲಾಗಿ 1 ನೇ ಆರೋಪಿ ಹೆಚ್ಚಿನ ಹಣ ಕೊಡುವುದಾಗಿ ನಂಬಿಸಿ ಮೋಸ ಮಾಡಿರುವುದಾಗಿ ಹೇಳಿರುತ್ತಾನೆ. ಆ ಮಹಜರ್ ಅಡಿಯಲ್ಲಿ ಮೇಲೆ ಹೇಳಿದ ಹಣ ಮತ್ತು ವಸ್ತುಗಳನ್ನು ಅಮಾನತ್ತುಪಡಿಸಿಕೊಂಡಿರುತ್ತೇನೆ. ಸಂಬಂಧಪಟ್ಟ ಪೋಲೀಸರು ಸದರಿ ವಸ್ತುಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸದೇ ಇದ್ದ ಕಾರಣ ಮುಂದುವರೆದ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿದಾರರ ಸಾಕ್ಷ್ಯವನ್ನು ಗಣಕೀಕೃತ ಮಾಡಿಕೊಳ್ಳಲಾಯಿತೆಂದು ಈ ಮೂಲಕ ದೃಢೀಕರಿಸಿರುತ್ತೇನೆ.

(ಸಾ ಓ ಹೇ ಕೇ ಸ ಇ ಎಂದು ಒಪ್ಪಿರುತ್ತಾರೆ)

( ಕಿರಣ್‌ಕುಮಾರ್ ಡಿ.ವಡಿಗೇರಿ)
ಹಿರಿಯ ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ.
ಅರಸೀಕೆರೆ. ದಿಃ **04-09-2024.**